# ಕರ್ನಾಟಕ ಸರ್ಕಾರ

Kindergarden (6)

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಂತಾಮಣಿ ತಾಲ್ಲೂಕು,
ಚಿಂತಾಮಣಿ.

## ನಮೂನೆ-2

(ನಿಯಮ - 3 ಉಪನಿಯಮ 5 (ಬಿ) )

* * * * *

ಅಕ್ಷರ ಪಾಜಿಕೋನನ ಮತ್ತು ಕಲ್ಯಾಣ ಟ್ರಸ್ಟ್ ವಿಶ್ವೇಶ್ವರಪುರಂ ಬೆಂಗಳೂರು

......ಗವರ್ನಿಂಗ್ ಕೌನ್ಸಿಲನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆಕ್ಟ್ 1-1995) ಸೆಕ್ಷನ್ 31 ರಂತೆ

ಈ ದಿನ ೨೮-೧-೨೦೧೧ (ಇಪ್ಪತ್ತೆಂಟು ಮಾಹೆ - ಒಂದು - ಎರಡು ಸಾವಿರದ ಹನ್ನೊಂದು) ಈ ಕೆಳಗೆ

ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

1) ಕ್ರಮ ಸಂಖ್ಯೆ : ೦೩

2) ಶಿಕ್ಷಣ ಸಂಸ್ಥೆಯ ವಿವರ : ಜ್ಞಾನ ಸ್ಕೂಲ್ ಪ್ರಾಥಮಿಕ ಶಾಲೆ
ಶಾಮಲ ಗಾವ ಹಳ್ಳಿ ಅಂಚೆ [illegible] ಹೋಬಳಿ
ಚಿಂತಾಮಣಿ ತಾ|| ಚಿಕ್ಕಬಳ್ಳಾಪುರ ಜಿಲ್ಲೆ.

3) ಅನುಮತಿ ನೀಡಿದ ತರಗತಿ : [illegible] ಪ್ರಾಥಮಿಕ ಶಾಲೆ

4) ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ : ೨೦೧೧ - ೧೨ ನೇ ಸಾಲು

5) ಅನುಮತಿ ನೀಡಿದ ಮಾಧ್ಯಮ : ಕನ್ನಡ

6) ಶುಲ್ಕ ಪಾವತಿ ಮಾಡಿರುವುದು : ರೂ. ೨೦೦೦ ರೂ.
D.D. No. 23653 ದಿ 27/10/2010

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮಸಂಖ್ಯೆ ೦೩ ಪುಟ ಸಂಖ್ಯೆ 52 ವಾಲ್ಯೂಂ ಸಂಖ್ಯೆ ೦೨ ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ.

ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗೊಳಪಟ್ಟು ನೀಡಲಾಗಿದೆ.

1. ಈ ನೋಂದಾವಣೆಯು ನಿಯಮ 3ಆ (4) ಮತ್ತು (5) ಕ್ಕೆ ಒಳಪಟ್ಟಿರುತ್ತದೆ.

2. ಗೌರ್ವನಿಂಗ್ ಕೌನ್ಸಿಲ್‌ರವರು ನಿಯಮ 4(4) ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

3. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠೋಪಕರಣಗಳು, ಪೀಠೋಪಕರಣಗಳು, ಸಿಬ್ಬಂದಿ ವರ್ಗ, ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

4. ಈ ಶಿಕ್ಷಣ ಸಂಸ್ಥೆಗೆ ಕನ್ನಡ ________ ಮಾಧ್ಯಮ ಪ್ರಾಥಮಿಕ ಶಾಲೆಯನ್ನು ತೆರೆಯಲು ನೋಂದಾಯಿಸುವ ವಿಚಾರವನ್ನು ಸರ್ಕಾರಿ ಆದೇಶ ಸಂಖ್ಯೆ : ಇಡಿ.14 ಪಿಜಿಸಿ ಇ ಎಸ್ 98, ದಿನಾಂಕ : 17-03-1999 ರನ್ವಯ ಪರಿಶೀಲಿಸಲಾಗಿದೆ. B.E.O ________ ಉಪ ನಿರ್ದೇಶಕರ ವರದಿಯನ್ವಯ ಈ ಸಂಸ್ಥೆಯು ಶಾಲೆಯನ್ನು ತೆರೆಯಲು ಉದ್ದೇಶಿಸಿರುವ ಸ್ಥಳದಲ್ಲಿ 2 ಕಿ.ಮೀ. ವಿಸ್ತೀರ್ಣದೊಳಗಿನ ಪ್ರದೇಶದಲ್ಲಿ ________ ಸರ್ಕಾರಿ ಪ್ರಾಥಮಿಕ ಶಾಲೆಗಳು, ________ ಖಾಸಗಿ ಅನುದಾನಿತ, ಅನುದಾನರಹಿತ ಪ್ರಾಥಮಿಕ ಶಾಲೆಗಳು ಈಗ ಅಸ್ತಿತ್ವದಲ್ಲಿರುತ್ತವೆ ಹಾಗೂ ಈ ಶಾಲೆಗಳು ಸದರಿ ಪ್ರದೇಶದ ಶೈಕ್ಷಣಿಕ ಅಗತ್ಯತೆಯನ್ನು ಪೂರೈಸಿರುವುದನ್ನು ಮನಗಾಣಲಾಗಿದೆ. ಅದಾಗ್ಯೂ ಸರ್ವೋಚ್ಚ ನ್ಯಾಯಾಲಯವು ಉನ್ನಿಕೃಷ್ಣನ್ ಪ್ರಕರಣದಲ್ಲಿ 14 ವರ್ಷಗಳ ವಯೋಮಿತಿಯೊಳಗಿನ ಮಕ್ಕಳಿಗೆ ಉಚಿತ ಶಿಕ್ಷಣದ ಸಂವಿಧಾನಾತ್ಮಕ ಹಕ್ಕನ್ನು ಎತ್ತಿಹಿಡಿದು, ಉಚಿತ ಹಾಗೂ ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸುವ ರಾಜ್ಯ ಸರ್ಕಾರದ ಜವಾಬ್ದಾರಿಯನ್ನು ಖಾಸಗಿ ಶಿಕ್ಷಣ ಸಂಸ್ಥೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಸಹ ಒದಗಿಸಬಹುದೆಂದು ಹಾಗೂ ರಾಜ್ಯ ಸರ್ಕಾರವು ನಡೆಸುವ ಶಾಲೆಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಚ್ಛಿಸದೇ ಇರುವ ಪೋಷಕರ, ಮಕ್ಕಳ ಶೈಕ್ಷಣಿಕ ಅಗತ್ಯತೆಯನ್ನು ಇಂತಹ ಖಾಸಗಿ ಶಿಕ್ಷಣ ಸಂಸ್ಥೆಗಳು ಪೂರೈಸುತ್ತವೆಯೆಂಬ ಅಂಶವನ್ನು ಎತ್ತಿಹಿಡಿದಿದೆ. ಈ ಸ್ಥಳದಲ್ಲಿ ಮತ್ತೊಂದು ಪ್ರಾಥಮಿಕ ಶಾಲೆಯ ಅಗತ್ಯತೆಯು ಇಲ್ಲದಿದ್ದರೂ ಸರ್ಕಾರಿ ಅಥವಾ ಅನುದಾನಿತ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಇಚ್ಛಿಸದೇ ಇರುವ ಪೋಷಕರ / ಮಕ್ಕಳ ಶೈಕ್ಷಣಿಕ ಅಗತ್ಯತೆಯನ್ನು ಪೂರೈಸಲು ಮತ್ತು ಪೋಷಕರಿಗೆ / ಮಕ್ಕಳಿಗೆ ಇಚ್ಛೆಯ ಆಯ್ಕೆ ಸ್ವಾತಂತ್ರ್ಯ ನೀಡುವ ಉದ್ದೇಶದಿಂದಲೂ ಹಾಗೂ ಸದರಿ ಶಿಕ್ಷಣ ಸಂಸ್ಥೆಯು ಸ್ವಯಂ ಪ್ರೇರಣೆಯಿಂದ ಸದರಿ ಸ್ಥಳದಲ್ಲಿ ಮತ್ತೊಂದು ಶಾಲೆಯನ್ನು ಶಾಶ್ವತ ಅನುದಾನ ರಹಿತ ಷರತ್ತಿನ ಮೇಲೆ ತೆರೆಯಲು ಇಚ್ಛಿಸಿರುವುದರಿಂದ, ಸದರಿ ಶಾಲೆಯನ್ನು ಮೇಲ್ದರ್ಜೆಗೇರಿಸಿ ನೋಂದಾಯಿಸಲಾಗಿದೆ.

5. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.

6. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

ಯಾವ ಆಡಳಿತ ಮಂಡಳಿಗೆ ಶಾಲೆಯನ್ನು ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ಶಾಲೆಯನ್ನು ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಕ್ಕೆ ಅವಕಾಶವಿರುವುದಿಲ್ಲ.

ಸರ್ಕಾರಿ ಆದೇಶ ಸಂಖ್ಯೆ : ಇಡಿ 28 ಪಿಜಿಸಿ 94, ದಿನಾಂಕ : 29-4-94 ರಂತೆ 1 ರಿಂದ 4ನೇ ತರಗತಿಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃಭಾಷಾ ಮಾಧ್ಯಮದಲ್ಲಿ ನಡೆಸಿ ಭಾಷಾ ನೀತಿ ಪಾಲಿಸುತ್ತಿರುವ ಶಾಲೆಗಳಿಗೆ 5ನೇ ತರಗತಿಯಿಂದ ಆಂಗ್ಲಮಾಧ್ಯಮಕ್ಕೆ ಮೇಲ್ದರ್ಜೆಗೇರಿಸಿ ನೋಂದಾಯಿಸಲಾಗಿದೆ. ಭಾಷಾ ನೀತಿಯ ಷರತ್ತಿಗೆ ಒಳಪಟ್ಟು ನೋಂದಣಿಯಾಗಿರುವ ಶಾಲೆಗಳಲ್ಲಿ ಭಾಷಾ ನೀತಿಯನ್ನು ಉಲ್ಲಂಘಿಸಿರುವುದು ಸರ್ಕಾರದ : ಇಲಾಖೆಯ : ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ಬಂದಲ್ಲಿ ನಿಯಮಗಳನ್ವಯ ಸದರಿ ಶಾಲೆಯ ನೋಂದಣಿಯನ್ನು ರದ್ದು ಪಡಿಸಲಾಗುವುದು.

ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

ಕರ್ನಾಟಕ ಸಮಗ್ರ ಶಿಕ್ಷಣ ಮಸೂದೆ, 1983 ( ಕರ್ನಾಟಕ ಆಕ್ಟ್ 1 ಆಫ್ 1995) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಹಾಗೂ ರಚಿಸಲಾದ ಮತ್ತು ಆಗಿಂದಾಗ್ಗೆ ರಚಿಸಲಾಗುವ ನಿಯಮಗಳನ್ನು ಸಂಬಂಧಪಡಿಯಲ್ಲಿ ಮತ್ತು ಪ್ರಾಧಿಕಾರಿ ನೀಡುವ ಎಲ್ಲಾ ಷರತ್ತುಗಳನ್ನು ಹಾಗೂ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಶಾಲೆಗಳಿಗೆ ಸಂಬಂಧಿಸಿದಂತೆ ನೋಂದಣಿಯಾಗಿರುವ ಶಾಲೆಗಳಲ್ಲವೂ ಸರ್ಕಾರಿ ಅಧಿಸೂಚನೆ ಸಂಖ್ಯೆ : ಇಡಿ 17೫ ಪಿ ಎಂ ಸಿ 95, ದಿನಾಂಕ : 7-9-98 ಮತ್ತು ಇಡಿ 175 ಪಿ ಎಂ ಸಿ 97 ದಿನಾಂಕ : 29-12-1998 ರಂತೆ ಶಾಶ್ವತ ಅನುದಾನ ರಹಿತ ಶಾಲೆಗಳೆಂಬುದಾಗಿ ಪರಿಗಣಿಸಿದೆ.

ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು (ಶಿಸ್ತು ಮತ್ತು ನಿಯಂತ್ರಣ) ನಿಯಮ 1978 ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

ಶಾಲೆಯನ್ನು ಪ್ರಾರಂಭಿಸಿದ 2 ತಿಂಗಳ ಅವಧಿಯೊಳಗೆ ಪ್ರಥಮ ಮಾನ್ಯತೆಗೆ ಸಂಬಂಧಿಸಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಜಿಲ್ಲಾ ಉಪ ನಿರ್ದೇಶಕರಿಗೆ ಅರ್ಜಿಯನ್ನು ಸಲ್ಲಿಸ ತಕ್ಕದ್ದು. ನಂತರ ಪ್ರತಿ 3 ವರ್ಷಗಳಿಗೊಮ್ಮೆ ಮಾನ್ಯತೆಯನ್ನು ನವೀಕರಿಸಿಕೊಳ್ಳತಕ್ಕದ್ದು.

ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಪಾಲಿಸತಕ್ಕದ್ದು.

ತರಬೇತಿ ಹೊಂದಿದ ಹಾಗೂ ಇಲಾಖಾ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಮಾತ್ರ.

16. ಕರ್ನಾಟಕ ಶಿಕ್ಷಣ ಮಸೂದೆಯ ಅನುಚ್ಛೇದ 6 ರ ಅಡಿಯಲ್ಲಿ ಉಪಬಂಧ 36 ರಿಂದ 39 ರಂತೆ ನೊಂದಣಿ ಮಾಡಿದ ಎಲ್ಲಾ ಶಾಲೆಗಳು 'ರೆಕಗ್ನಿಷನ್' ಹಾಗೂ 'ಪ್ರಾವಿಷನಲ್ ರೆಕಗ್ನಿಷನ್' ವ್ಯಾಪ್ತಿಗೆ ಬರುವುದು.

17. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಜಿಲ್ಲಾ ಉಪ ನಿರ್ದೇಶಕರ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.

18. ಕರ್ನಾಟಕ ಶಿಕ್ಷಣ ಮಸೂದೆ, 1993ರ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪಾಠೋಪಕರಣ, ಪೀಠೋಪಕರಣ, ಗ್ರಂಥಾಲಯದ ಪುಸ್ತಕಗಳು, ಆಟದ ಮೈದಾನ, ಶಾಲಾ ಕಟ್ಟಡ ಮುಂತಾದ ಅಗತ್ಯ ಸೌಲಭ್ಯಗಳನ್ನು ಒಂದು ವರ್ಷದೊಳಗೆ ಒದಗಿಸತಕ್ಕದ್ದು. ಇಲ್ಲದಿದ್ದಲ್ಲಿ ನೊಂದಣಿಯನ್ನು ರದ್ದುಗೊಳಿಸಲಾಗುವುದು.

19. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೊಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ 2 ತಿಂಗಳೊಳಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಪ್ಪದೇ ತಿಳಿಸತಕ್ಕದ್ದು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ರದ್ದಾಗುವುದು.

ದಿನಾಂಕ : ೨೪/೧/೨೦೧೫

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಸಾರ್ವಜನಿಕ ಶಿಕ್ಷಣ ಇಲಾಖೆ
ಚಿಂತಾಮಣಿ

ಉಪನಿರ್ದೇಶಕರು ರವರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.

ಸಂಖ್ಯೆ: ಅನು2/4905/ಪ್ರಾ.ಶಿ.ಅ/ನೋಂ/23/2010-11 ದಿನಾಂಕ: 19-05-2011.

ನಮೂನೆ-2

(ನಿಯಮ 3 ಉಪನಿಯಮ 5(ಬಿ))

ಪ್ರಮಾಣ ಪತ್ರ ಸಂಖ್ಯೆ: 05/2011-12

ಸಂಖ್ಯೆ.........ಆಕ್ಸ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್(ರಿ), ನಂ. 91/2, ಡಾ: ಎ.ಎನ್.ಕೃಷ್ಣರಾವ್ ರಸ್ತೆ, ವಿ.ವಿ.ಪುರಂ, ಬೆಂಗಳೂರು-4, ರವರ ವತಿಯಿಂದ ನಡೆಯುತ್ತಿರುವ ಜೈನ್ ಪ್ರಾಥಮಿಕ ಶಾಲೆ, ನಂ.13, ಕಾವಲಗಾನಹಳ್ಳಿ, ಅಂಬಾಜಿದುರ್ಗ (ಹೋಬಳಿ), ಚಿಂತಾಮಣಿ ತಾ: ಚಿಕ್ಕಬಳ್ಳಾಪುರ ಜಿಲ್ಲೆ, ಇದರ ಗವರ್ನಿಂಗ್ ಕೌನ್ಸಿಲ್‌ಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆಕ್ಟ್ 1995) ಸೆಕ್ಷನ್ 31 ರಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಇಡಿ/44/ಪಿಜಿಸಿ/2002, ದಿನಾಂಕ: 11-06-02 ರ ಪ್ರಕಾರ ಈ ದಿನ 19-05-2011 ರಂದು ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ: 05, ಪುಟ ಸಂಖ್ಯೆ: 17 ವಾಲ್ಯೂಂ ಸಂಖ್ಯೆ: 01 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1. | ಕ್ರಮ ಸಂಖ್ಯೆ | 05/2011-12 |
| 2. | ಶಾಲೆಯ ಹೆಸರು ಮತ್ತು ವಿಳಾಸ | ಜೈನ್ ಪ್ರಾಥಮಿಕ ಶಾಲೆ, ನಂ.13, ಕಾವಲಗಾನಹಳ್ಳಿ, ಅಂಬಾಜಿದುರ್ಗ(ಹೋಬಳಿ),ಚಿಂತಾಮಣಿ ತಾ: ಚಿಕ್ಕಬಳ್ಳಾಪುರ ಜಿಲ್ಲೆ. |
| 3. | ಅನುಮತಿ ನೀಡಿದ ತರಗತಿ | 01 ರಿಂದ 05ನೇ ತರಗತಿ (ಶಾಶ್ವತ ಅನುದಾನರಹಿತವಾಗಿ) |
| 4. | ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ | 2011-12 (Permanently without-aid) |
| 5. | ಅನುಮತಿ ನೀಡಿದ ಮಾಧ್ಯಮ | ಕನ್ನಡ ಮಾಧ್ಯಮ |
| 6. | ಶುಲ್ಕ ಪಾವತಿ ಮಾಡಿರುವುದು | ರೂ.5,000-00 |

ಈ ನೋಂದಣಿ ಪ್ರಮಾಣಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ. ಇದರಲ್ಲಿ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ ಮೇಲ್ಕಂಡ (ನೋಂದಣಿ) ಅನುಮತಿಯನ್ನು ರದ್ದುಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

1. ಈ ನೋಂದಾವಣೆಯು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ, ವರ್ಗೀಕರಣ) ನಿಯಮ-1997 ನಿಯಮ-3(5)(ಡಿ) ನಲ್ಲಿ ಸೂಚಿಸಿರುವ ಅಂಶಗಳಿಗೆ ಒಳಪಟ್ಟಿರುತ್ತದೆ.
2. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗಧೀಕರಣ ಇತ್ಯಾದಿ) ನಿಯಮಾವಳಿಗಳು 1995ರ ನಿಯಮ 4, 5, 6 ಮತ್ತು 8ರನ್ವಯ ಸುರಕ್ಷತಾ ಕ್ರಮವಾಗಿ, ಶಾಲಾ ಕಟ್ಟಡವು ಕಡ್ಡಾಯವಾಗಿ ಉತ್ತಮಗುಣಮಟ್ಟದ ಮೇಲ್ಛಾವಣಿಯನ್ನು ಹೊಂದಿದ್ದು, ಉತ್ತಮ ಗಾಳಿ ಬೆಳಕಿಗೆ ಅವಕಾಶವಿರಬೇಕು. ಗಂಡು ಮತ್ತು ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಗಳನ್ನು ಒದಗಿಸಬೇಕು. ಕುಡಿಯುವ ನೀರನ್ನು ಒದಗಿಸಿರಬೇಕು. ಶಾಲಾ ಆವರಣದಲ್ಲಿರುವ ಅಪಾಯಕಾರಿ ಸ್ಥಳಗಳಿಗೆ ಬೇಲಿ ಹಾಕಿ, ಶಾಲಾ ಆವರಣಕ್ಕೆ ಮಕ್ಕಳ ಸುರಕ್ಷತೆಗಾಗಿ ಕಾಂಪೌಂಡನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು ಮತ್ತು ಬೆಂಕಿ ಆಕಸ್ಮಿಕಗಳನ್ನು ತಪ್ಪಿಸಲು ಅಗತ್ಯ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕು.
3. ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
4. ಕರ್ನಾಟಕ ಶಿಕ್ಷಣ ಕಾಯ್ದೆ ಸೆಕ್ಷನ್-41(5) ರಂತೆ ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
5. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ, ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಿಸತಕ್ಕದ್ದಲ್ಲ.
6. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸಿದ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಆಕ್ಟ್ ಸಂಖ್ಯೆ: 1:95) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
7. ಈ ಪ್ರಾಥಮಿಕ ಶಾಲಾ ನೋಂದಾವಣೆಯು ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ/175/ಪಿಎಂಸಿ/95, ದಿ: 07-09-98 ಮತ್ತು 29-12-98ರ ಪ್ರಕಾರ ಶಾಶ್ವತ ಅನುದಾನರಹಿತವಾಗಿರುತ್ತದೆ (Permanently without-aid).
8. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಶಿಸ್ತು ಮತ್ತು ನಿಯಂತ್ರಣ) ನಿಯಮ 1999ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು/ ಅವುಗಳಿಗೆ ಬದ್ಧವಾಗಿರತಕ್ಕದ್ದು.
9. ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತುನಿಗಧೀಕರಣ ಇತ್ಯಾದಿ) ನಿಯಮಾವಳಿ 1995 ರನ್ವಯ ಇಲಾಖೆ ಮತ್ತು ಸರ್ಕಾರ ನಿಗಧಿಪಡಿಸಿದ ಪಠ್ಯಪುಸ್ತಕಗಳನ್ನು ಮಾತ್ರ ಬೋಧಿಸತಕ್ಕದ್ದು ಹಾಗೂ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಹೊರೆಯಾಗದಂತೆ ಕ್ರಮವಹಿಸುವುದು.
10. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತುನಿಗಧೀಕರಣ ಇತ್ಯಾದಿ)

ನಿಯಮಾವಳ 1995. ದಿನಾಂಕ: 04-10-96ರ ನಿಯಮ-10 ರಂತೆ ಟರ್ಮ್ ಶುಲ್ಕ. ಬೋಧನಾ ಶುಲ್ಕ. ವಿಶೇಷ ಅಭಿವೃದ್ಧಿ ಶುಲ್ಕಗಳನ್ನು ಮಾತ್ರ ವಸೂಲಿ ಮಾಡತಕ್ಕದ್ದು.

11. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ/39/ವಿವಿಧ/99 ದಿನಾಂಕ: 14-03-2000 ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ರೆಗ್ಯುಲೇಷನ್ ಆಫ್ ಸರ್ಟನ್ ಫೀಸ್ ಅಂಡ್ ಡೊನೇಷನ್ಸ್) ನಿಯಮ-1999ರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ಈ ನಿಯಮದಂತೆ ಯಾವುದೇ ವಂತಿಗೆಯನ್ನು ವಸೂಲು ಮಾಡುವಂತಿಲ್ಲ.

12. ಅನುಮತಿ ಪಡೆದ 2 ತಿಂಗಳೊಳಗಾಗಿ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಆಕ್ಟ್ 1 ಆಫ್ 1995) ಪ್ರಕಾರ ಸೆಕ್ಷನ್ 36 ರಿಂದ 39ರ ರೀತ್ಯಾ ಹಾಗೂ ಇಡಿ/131/ವಿವಿಧ/98. ಬೆಂಗಳೂರು. ದಿನಾಂಕ: 04-11-99 ರಂತೆ ಮಾನ್ಯತೆ ನವೀಕರಣ ಹೊಂದಲು ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ/137/ವಿವಿಧ/98. ಬೆಂಗಳೂರು ದಿನಾಂಕ: 19-05-99ರ ಪ್ರಕಾರ ಸಕ್ಷಮ ಪ್ರಾಧಿಕಾರಿಗಳಿಗೆ ಅರ್ಜಿ ಸಲ್ಲಿಸತಕ್ಕದ್ದು ಹಾಗೂ ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ನಿಗಧಿತ ಭದ್ರತಾ ಠೇವಣಿಯನ್ನು ಜಿಲ್ಲಾ ಉಪನಿರ್ದೇಶಕರ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿಡತಕ್ಕದ್ದು.

13. ಸರ್ಕಾರಿ ಆದೇಶ ಸಂಖ್ಯೆ: ಇಡಿ/28/ಪಿಜಿಸಿ/94. ದಿನಾಂಕ: 29-04-94 ರಂತೆ 1 ರಿಂದ 5ನೇ ತರಗತಿಯವರೆಗೆ ಕನ್ನಡ ಅಥವಾ ಮಕ್ಕಳ ಮಾತೃಭಾಷಾ ಮಾಧ್ಯಮದಲ್ಲಿ ನಡೆಸಿ ಭಾಷಾ ನೀತಿ ಪಾಲಿಸಬೇಕು.

14. ಸರ್ಕಾರಿ ಆದೇಶ ಸಂಖ್ಯೆ: ಇಡಿ/52/ವಿವಿದ/99 ದಿನಾಂಕ: 02-02-2000 ರ ಅನೆಕ್ಸರ್-5ರ ನಿಯಮದಂತೆ ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ಪಾಲಿಸತಕ್ಕದ್ದು.

15. ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.

16. ಕರ್ನಾಟಕ ಶಿಕ್ಷಣ ಮಸೂದೆಯ ನಿಯಮಗಳಂತೆ ಶಾಲೆಗೆ ಬೇಕಾದ ಪೀಠೋಪಕರಣ. ಪಾಠೋಪಕರಣ. ಗ್ರಂಥಾಲಯ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ. ಆಟದ ಮೈದಾನ ಶಾಲಾ ಕಟ್ಟಡಗಳನ್ನು ಮೂರು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು.

17. ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.

18. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳೊಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತನ್ನಿಂದ ತಾನೇ ರದ್ದಾಗುವುದು.

19. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ/27/ಎಸ್‌ಪಿಇ/03 ದಿನಾಂಕ: 13-02-2003ರ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ. ಶಾಲೆಯಲ್ಲಿ ನೇಮಕಗೊಂಡಿರುವ ಸಿಬ್ಬಂಧಿಗಳ ಸೇವಾಪುಸ್ತಕವನ್ನು ತೆರೆದು. ಅದರಲ್ಲಿ ಶಿಕ್ಷಕರ ಸೇವಾವಿವರಗಳನ್ನು ನಿಯಮಾನುಸಾರ ದಾಖಲು ಮಾಡಿ ಕಡ್ಡಾಯವಾಗಿ ನಿರ್ವಹಿಸುವುದು.

20. ಶಿಕ್ಷಕರನ್ನು ಗಣತಿ ಕಾರ್ಯಕ್ಕೆ ತಪ್ಪದೇ ನಿಯೋಜಿಸುವುದು.

21. ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಯಾವುದೇ ದಾಖಲೆಗಳು ಸುಳ್ಳು ದಾಖಲೆಗಳೆಂದು ಕಂಡುಬಂದಲ್ಲಿ ಈ ನೋಂದಣಿಯನ್ನು ರದ್ದುಪಡಿಸಲಾಗುವುದು.

22. ಪ್ರತಿ ತರಗತಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ: 50ಕ್ಕೆ ಮೀರಬಾರದು.

23. 1 ರಿಂದ 5ನೇ ತರಗತಿಯಲ್ಲಿ ಕನ್ನಡ / ಮಾತೃಭಾಷಾ ಮಾಧ್ಯಮ ಪುಸ್ತಕವನ್ನು ಹೊರತುಪಡಿಸಿ ಆಂಗ್ಲ ಮಾಧ್ಯಮದ ಯಾವುದೇ ಪುಸ್ತಕಗಳನ್ನು ಹೆಚ್ಚುವರಿಯಾಗಿ ತರಗತಿಯಲ್ಲಿ ಬಳಸಬಾರದು.

24. ಅನುಮತಿ ನೀಡಿದ 5 ವರ್ಷಗಳವರೆಗೆ ಶಾಲಾ ಸ್ಥಳಾಂತರ ಮತ್ತು ಹಸ್ತಾಂತರಕ್ಕೆ ಅವಕಾಶವಿರುವುದಿಲ್ಲ.

(ಸಿ.ಯು.ಚಂದ್ರಶೇಖರಪ್ಪ)
ಉಪನಿರ್ದೇಶಕರು. ಚಿಕ್ಕಬಳ್ಳಾಪುರ.

ಪ್ರತಿಯನ್ನು:

1) ಕಾರ್ಯದರ್ಶಿಗಳು. ಅರ್ಕ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್(ರಿ). ನಂ. 91/2. ಡಾ: ಎ.ಎನ್.ಕೃಷ್ಣರಾವ್ ರಸ್ತೆ. ವಿ.ವಿ.ಪುರಂ. ಬೆಂಗಳೂರು-4
2) ಕ್ಷೇತ್ರ ಶಿಕ್ಷಣಾಧಿಕಾರಿಗಳು. ಚಿಂತಾಮಣಿ ತಾಲ್ಲೂಕು. ಚಿಕ್ಕಬಳ್ಳಾಪುರ ಜಿಲ್ಲೆ.
3) ಕ/ಪ್ರತಿ.

## ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ ಚಿಂತಾಮಣಿ ತಾ. ಚಿಕ್ಕಬಳ್ಳಾಪುರ ಜಿಲ್ಲೆ

ನಮೂನೆ – 2

ಉಪನಿಯಮ –೬ (ಎ)

ಕರ್ನಾಟಕ ಶಿಕ್ಷಣ ಕಾಯ್ದೆ ಜಾರಿಗೆ ಬಂದಾಗ ಅಸ್ತಿತ್ವದಲ್ಲಿದ್ದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ತಾತ್ಕಾಲಿಕ ಮಾನ್ಯತೆ ನವೀಕರಣ ಪ್ರಮಾಣ ಪತ್ರ 20/2011-12

ಸಂ: ದಿನಾಂಕ: 11-11-2011

[illegible] ಅಂಡ್ ಕಲ್ಚರಲ್ ಟ್ರಸ್ಟ್ ವಿ.ವಿ.ಪುರಂ ಬೆಂಗಳೂರು. ರವರ ವತಿಯಿಂದ ನಡೆಯುತ್ತಿರುವ ಜೈನ ಪಬ್ಲಿಕ್ ಸ್ಕೂಲ್ [illegible] ಈ ಶಾಲೆಗೆ 2011-12 ವರೆಗೆ ಮಾನ್ಯತೆ ~~ನವೀಕರಣವನ್ನು~~ ಈ ಕೆಳಗೆ ಕಾಣಿಸಿರುವ ತರಗತಿ / ವಿಭಾಗಗಳಿಗೆ ಈ ಕೆಳಕಂಡ ಶರತ್ತುಗಳನ್ನು ಪೂರೈಸುವ ನಿಬಂಧನೆ ಮೇರೆಗೆ ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮ 36 ರ ಉಪನಿಯಮ 6 ರಂತೆ ~~ನವೀಕರಿಸಿದೆ~~. ಪ್ರಥಮ ಮಾನ್ಯತೆ ನೀಡಿದೆ.

| ಕ್ರಮ ಸಂಖ್ಯೆ | ಶಾಲೆಯ ಹೆಸರು ಮತ್ತು ವಿಳಾಸ | ಮಾನ್ಯತೆ ನೀಡಿದ ಸಾಲುಗಳು | ಮಾನ್ಯತೆ ನೀಡಬೇಕಾದ ತರಗತಿ/ವಿಭಾಗಗಳು | | ಶಾಲೆಯು ಯಾವ ವರ್ಗಕ್ಕೆ ಸೇರಿದೆ | ಷರಾ |
|---|---|---|---|---|---|---|
| 1 | [illegible] | 2011-12 [illegible] | 1 ನೇ | 1 | ಸಾಮಾನ್ಯ | 1 ರಿಂದ 5ನೇ ತರಗತಿವರೆಗೆ ಕನ್ನಡ ಮಾಧ್ಯಮವು ಶಾಶ್ವತ ಅನುದಾನರಹಿತವಾಗಿ 2011-12 ನೇ ಸಾಲಿಗೆ ಪ್ರಥಮ ಮಾನ್ಯತೆ ನೀಡಿದೆ. |
| | | | 2 ನೇ | 1 | | |
| | | | 3 ನೇ | 1 | | |
| | | | 4 ನೇ | 1 | | |
| | | | 5 ನೇ | 1 | | |
| | | | 6 ನೇ | 1 | | |
| | | | 7 ನೇ | 1 | | |
| | | | ಒಟ್ಟು | 7 | | |

ಷರತ್ತುಗಳು:

1. ಕರ್ನಾಟಕ ಶಿಕ್ಷಣ ಮತ್ತು ಅನುದಾನ ಸಂಹಿತೆಯ ಎಲ್ಲ ನಿಯಮಗಳನ್ನು ಸರ್ಕಾರದ ಹಾಗೂ ಇಲಾಖೆಯು ಆಗಿಂದಾಗ್ಗೆ ಹೊರಡಿಸುವ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
2. ಸರ್ಕಾರಿ ಆದೇಶ ಸಂಖ್ಯೆ: ಇಡಿ/ವಿವಿದ/99 ದಿ: 02-02-2010 ರಂತೆ ಶಾಲೆಯ ಸಿಬ್ಬಂದಿ ರಚನೆ ಇರಬೇಕು
3. ಶಾಲೆಗೆ ಅಗತ್ಯವಾದ ಪೀಠೋಪಕರಣ, ಪಾಠೋಪಕರಣ ಹಾಗೂ ಕನಿಷ್ಠ ಮೂಲಭೂತ ಸೌಕರ್ಯ ಒದಗಿಸಬೇಕು
4. ಶಾಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಇಡ/59/ವಿವಿದ/99 ದಿ: 02-02-2010 ಅನುಚ್ಛೇದ 4 ನಿಯಮ 3 ರಂತೆ ವಿದ್ಯಾರ್ಥಿಗಳ ದಾಖಲಾತಿ / ಹಾಜರಾತಿ ಇರುವಂತೆ ಪಾಲಿಸುವುದು
5. ಇಲಾಖಾ ನಿಯಮದಂತೆ ಮಾತ್ರ ಶುಲ್ಕ ವಸೂಲಿ ಮಾಡುವುದು ಮತ್ತು ಇದರ ಲೆಕ್ಕ ಪತ್ರಗಳನ್ನು ನಿರ್ವಹಿಸಿ ಶಾಲೆಯ ಹೆಸರಿನಲ್ಲಿಟ್ಟು ಶಾಲಾ ತನಿಖಾ ಸಮಯದಲ್ಲಿ ಹಾಜರು ಪಡಿಸಬೇಕು.
6. ಇಲಾಖೆಯ ಪೂರ್ವಾನುಮತಿ ಪಡೆಯದೆ ಹೆಚ್ಚಿನ ವಿಭಾಗಗಳನ್ನು ತೆರೆಯಬಾರದು
7. ಹಿಂದಿನ ಸಾಲಿನವರೆಗೆ ಲೆಕ್ಕ-ಪತ್ರಗಳನ್ನು ನೋಂದಣಾಧಿಕಾರಿಗಳಿಗೆ ಸಲ್ಲಿಸಿದ ಸ್ವೀಕೃತಿ ಹಾಗೂ ನೊಂದಣಾಧಿಕಾರಿಗಳಿಂದ ಅನುಮೋದಿತ ಆಡಳಿತ ಮಂಡಳಿ ಸದಸ್ಯರ ಪಟ್ಟಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.
8. ಕರ್ನಾಟಕ ಶಿಕ್ಷಣ ಸಂಹಿತೆ ನಿಯಮಗಳಂತೆ ಸ್ಥಿರ ನಿಧಿ ಇಡಬೇಕು
9. ಇಲಾಖೆಯು ನಿರ್ಧರಿಸಲ್ಪಟ್ಟ ಪಠ್ಯ ಪುಸ್ತಕವನ್ನೇ ಬೋಧಿಸಬೇಕು
10. ಶಾಲೆಯಲ್ಲಿ ಬಾಲಕ / ಬಾಲಕಿಯರಿಗೆ ಪ್ರತ್ಯೇಕವಾಗಿ ಶೌಚಾಲಯ ವ್ಯವಸ್ಥೆಒದಗಿಸುವುದು
11. 1 ರಿಂದ 5 ನೇ ತರಗತಿಯ ವರೆಗೆ ಯಾವ ಮಾಧ್ಯಮದಲ್ಲಿ ನೋಂದಣಿ ನೀಡಲಾಗಿದೆಯೋ ಅದೇ ಮಾಧ್ಯಮದಲ್ಲಿ ಶಾಲೆ ನಡೆಸತಕ್ಕದ್ದು
12. ಶಿಕ್ಷಕರಿಗೆ ಸೇವಾ ಭದ್ರತೆ ಒದಗಿಸಿ ಮಕ್ಕಳ ಸುರಕ್ಷತೆಯ ಬಗ್ಗೆ ಎಲ್ಲ ಕ್ರಮಗಳನ್ನು ಕೈಗೊಳ್ಳುವುದು

[illegible signature] 11/11

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ

ಪ್ರತಿಗಳು:

1. --------------------------------------------

2. ಕಛೇರಿ ಪ್ರತಿ

(1) ಕಾರ್ಯದರ್ಶಿಗಳು ಜೈನ ಪಬ್ಲಿಕ್ ಸ್ಕೂಲ್ [illegible] ಚಿಂತಾಮಣಿ.

(2) ಕಛೇರಿ ಪ್ರತಿ.

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ ಚಿಂತಾಮಣಿ ತಾ. ಚಿಕ್ಕಬಳ್ಳಾಪುರ ಜಿಲ್ಲೆ

## ನಮೂನೆ – 2

### ಉಪನಿಯಮ -6 (ಎ)

ಕರ್ನಾಟಕ ಶಿಕ್ಷಣ ಕಾಯ್ದೆ ಜಾರಿಗೆ ಬಂದಾಗ ಅಸ್ತಿತ್ವದಲ್ಲಿದ್ದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳ ತಾತ್ಕಾಲಿಕ ಮಾನ್ಯತೆ ನವೀಕರಣ ಪ್ರಮಾಣ ಪತ್ರ

ಸಂ: ಶಿ.(ಪ್ರಾ)/ಕ್ಷೇ.ಶಿ.ಅ. ಮಾನ್ಯತೆ-49/12-13. ದಿನಾಂಕ: 28-07-2012

[illegible] ಬೆಂಗಳೂರು ರವರ ವತಿಯಿಂದ ನಡೆಯುತ್ತಿರುವ ಕ್ರೈಸ್ ಪಬ್ಲಿಕ್ ಶಾಲೆ ಕಾವಲಗಾನಹಳ್ಳಿ ಚಿಂತಾಮಣಿ(ತಾ) ಈ ಶಾಲೆಗೆ 2016-17 ವರೆಗೆ ಮಾನ್ಯತೆ ನವೀಕರಣವನ್ನು ಈ ಕೆಳಗೆ ಕಾಣಿಸಿರುವ ತರಗತಿ / ವಿಭಾಗಗಳಿಗೆ ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ನಿಬಂಧನೆ ಮೇರೆಗೆ ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮ 30 ರ ಉಪನಿಯಮ 6 ರಂತೆ ನವೀಕರಿಸಿದೆ.

| ಕ್ರಮ ಸಂಖ್ಯೆ | ಶಾಲೆಯ ಹೆಸರು ಮತ್ತು ವಿಳಾಸ | ಮಾನ್ಯತೆ ನೀಡಿದ ಸಾಲುಗಳು | ಮಾನ್ಯತೆ ನೀಡಬೇಕಾದ ತರಗತಿ/ವಿಭಾಗಗಳು | | ಶಾಲೆಯು ಯಾವ ವರ್ಗಕ್ಕೆ ಸೇರಿದ | ಷರಾ |
|---|---|---|---|---|---|---|
| 1 | ಕ್ರೈಸ್ ಪಬ್ಲಿಕ್ ಶಾಲೆ ಕಾವಲಗಾನಹಳ್ಳಿ ಚಿಂತಾಮಣಿ (ತಾ) | 2012-13 ರಿಂದ 2016-17 ನೇ ಸಾಲಿನವರೆಗೆ | 1 ನೇ | 1 | ಸಾಮಾನ್ಯ | 1-5 ನೇ ತರಗತಿಗಳಿಗೆ ಕನ್ನಡ ಮಾಧ್ಯಮದಲ್ಲಿ ಶಾಶ್ವತ ಅನುದಾನ ರಹಿತವಾಗಿ ಮಾನ್ಯತೆ [illegible] ನವೀಕರಿಸಿದೆ |
| | | | 2 ನೇ | 1 | | |
| | | | 3 ನೇ | 1 | | |
| | | | 4 ನೇ | 1 | | |
| | | | 5 ನೇ | 1 | | |
| | | | ~~6 ನೇ~~ | ~~1~~ | | |
| | | | ~~7 ನೇ~~ | ~~1~~ | | |
| | | | ಒಟ್ಟು | 5 | | |

ಷರತ್ತುಗಳು:

1. ಕರ್ನಾಟಕ ಶಿಕ್ಷಣ ಮತ್ತು ಅನುದಾನ ಸಂಹಿತೆಯ ಎಲ್ಲ ನಿಯಮಗಳನ್ನು ಸರ್ಕಾರದ ಹಾಗೂ ಇಲಾಖೆಯು ಆಗಿಂದಾಗ್ಗೆ ಹೊರಡಿಸುವ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
2. ಸರ್ಕಾರಿ ಆದೇಶ ಸಂಖ್ಯೆ: ಇಡಿ/ವಿವಿದ/99 ದಿ: 02-02-2010 ರಂತೆ ಶಾಲೆಯ ಸಿಬ್ಬಂದಿ ರಚನೆ ಇರಬೇಕು
3. ಶಾಲೆಗೆ ಅಗತ್ಯವಾದ ಪೀಠೋಪಕರಣ, ಪಾಠೋಪಕರಣ ಹಾಗೂ ಕನಿಷ್ಠ ಮೂಲಭೂತ ಸೌಕರ್ಯ ಒದಗಿಸಬೇಕು.
4. ಶಾಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಇಡ/59/ವಿವಿದ/99 ದಿ: 02-02-2010 ಅನುಚ್ಛೇದ 4 ನಿಯಮ 3 ರಂತೆ ವಿದ್ಯಾರ್ಥಿಗಳ ದಾಖಲಾತಿ / ಹಾಜರಾತಿ ಇರುವಂತೆ ಪಾಲಿಸುವುದು
5. ಇಲಾಖಾ ನಿಯಮದಂತೆ ಮಾತ್ರ ಶುಲ್ಕ ವಸೂಲಿ ಮಾಡುವುದು ಮತ್ತು ಇದರ ಲೆಕ್ಕ ಪತ್ರಗಳನ್ನು ನಿರ್ವಹಿಸಿ ಶಾಲೆಯ ಹೆಸರಿನಲ್ಲಿಟ್ಟು ಶಾಲಾ ತನಿಖಾ ಸಮಯದಲ್ಲಿ ಹಾಜರು ಪಡಿಸಬೇಕು.
6. ಇಲಾಖೆಯ ಪೂರ್ವಾನುಮತಿ ಪಡೆಯದೆ ಹೆಚ್ಚಿನ ವಿಭಾಗಗಳನ್ನು ತೆರೆಯಬಾರದು
7. ಹಿಂದಿನ ಸಾಲಿನವರೆಗೆ ಲೆಕ್ಕ-ಪತ್ರಗಳನ್ನು ನೋಂದಣಾಧಿಕಾರಿಗಳಿಗೆ ಸಲ್ಲಿಸಿದ ಸ್ವೀಕೃತಿ ಹಾಗೂ ನೊಂದಣಾಧಿಕಾರಿಗಳಿಂದ ಅನುಮೋದಿತ ಆಡಳಿತ ಮಂಡಳಿ ಸದಸ್ಯರ ಪಟ್ಟಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.
8. ಕರ್ನಾಟಕ ಶಿಕ್ಷಣ ಸಂಹಿತೆ ನಿಯಮಗಳಂತೆ ಸ್ಥಿರ ನಿಧಿ ಇಡಬೇಕು
9. ಇಲಾಖೆಯು ನಿರ್ಧರಿಸಲ್ಪಟ್ಟ ಪಠ್ಯ ಪುಸ್ತಕವನ್ನೇ ಬೋಧಿಸಬೇಕು
10. ಶಾಲೆಯಲ್ಲಿ ಬಾಲಕ / ಬಾಲಕಿಯರಿಗೆ ಪ್ರತ್ಯೇಕವಾಗಿ ಶೌಚಾಲಯ ವ್ಯವಸ್ಥೆಒದಗಿಸುವುದು
11. 1 ರಿಂದ 5 ನೇ ತರಗತಿಯ ವರೆಗೆ ಯಾವ ಮಾಧ್ಯಮದಲ್ಲಿ ನೋಂದಣಿ ನೀಡಲಾಗಿದೆಯೋ ಅದೇ ಮಾಧ್ಯಮದಲ್ಲಿ ಶಾಲೆ ನಡೆಸತಕ್ಕದ್ದು
12. ಶಿಕ್ಷಕರಿಗೆ ಸೇವಾ ಭದ್ರತೆ ಒದಗಿಸಿ ಮಕ್ಕಳ ಸುರಕ್ಷತೆಯ ಬಗ್ಗೆ ಎಲ್ಲ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

1. ಕಾರ್ಯದರ್ಶಿ, ಕ್ರೈಸ್ ಪಬ್ಲಿಕ್ ಶಾಲೆ. ಕಾವಲಗಾನಹಳ್ಳಿ ಚಿಂತಾಮಣಿ(ತಾ)
2. ಕ/ಪ್ರತಿ

ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ:ಸಿ8[7] ಶಾಶಿಅ.ಹೊಪ್ರೌಶಾ ಅನು/156/2011-12 ದಿನಾಂಕ: 31/3/2012

ನಮೂನೆ-2

[ನಿಯಮ 3 ಉಪನಿಯಮ 5(ಬಿ)]

ಪ್ರಮಾಣ ಪತ್ರ ಸಂಖ್ಯೆ: 142/2012-13

&&&

ಅರ್ಕ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ (ರಿ), ವಿ.ವಿ.ಪುರಂ, ಬೆಂಗಳೂರು. ಈ ಶಿಕ್ಷಣ ಸಂಸ್ಥೆಯ ಹೊಸ ಪ್ರೌಢಶಾಲೆಯನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983 [ಕರ್ನಾಟಕ ಆಕ್ಟ್ 1995] ಸೆಕ್ಷನ್ 31 ರಂತೆ 2012-13ನೇ ಸಾಲಿನಿಂದ ಹೊಸ ಶಾಲೆ ಪ್ರಾರಂಭಿಸಲು ಮಂಜೂರಾತಿ ನೀಡಿ ನೊಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| 1. ಕ್ರಮ ಸಂಖ್ಯೆ | : | 142/2012-13 |
| 2. ಶಾಲೆಯ ಹೆಸರು ಮತ್ತು ವಿಳಾಸ | : | ಜೈನ್ ಪಬ್ಲಿಕ್ ಪ್ರೌಢಶಾಲೆ, ಕವಲಗಾನಹಳ್ಳಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. |
| 3. ಅನುಮತಿ ನೀಡಿದ ತರಗತಿ | : | 8ನೇ ತರಗತಿ, 9ನೇ ತರಗತಿ, 10ನೇ ತರಗತಿ |
| 4. ಪ್ರಾರಂಭಿಸಬೇಕಾದ ತರಗತಿಗಳು | : | 8ನೇ ತರಗತಿ, 9ನೇ ತರಗತಿ, 10ನೇ ತರಗತಿ. |
| 5. ಶೈಕ್ಷಣಿಕ ವರ್ಷ | : | 2012-13 2013-14 2014-15 |
| 6. ಅನುಮತಿ ನೀಡಿದ ಮಾಧ್ಯಮ | : | ಆಂಗ್ಲ ಮಾಧ್ಯಮ (ಶಾಶ್ವತ ಅನುದಾನರಹಿತ) |
| 7. ಶುಲ್ಕ ಪಾವತಿ ಮಾಡಿರುವುದು | : | ಡಿ.ಡಿ. ನಂ. 971970 ದಿನಾಂಕ: 31.10.2011 ರೂ. 10,000/- |

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ: 142/2012-13 ಪುಟ ಸಂಖ್ಯೆ 155 .ವಾಲ್ಯೂಂ ಸಂಖ್ಯೆ: 09 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೊಂದಾಯಿಸಲಾಗಿದೆ.

1. ಈ ನೋಂದಾವಣಿಯ ನಿಯಮ 3[5][4]ಕ್ಕೆ ಒಳಪಟ್ಟಿರುತ್ತದೆ.
2. ಗೌವರ್ನಿಂಗ್ ಕೌನ್ಸಿಲ್ ಇವರು ನಿಯಮ 4[4]ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
3. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪೀಠೋಪಕರಣಗಳು, ಸಿಬ್ಬಂದಿ ವರ್ಗ ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
4. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
5. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
6. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು.
7. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 [ಕರ್ನಾಟಕ ಆಕ್ಟ್ ಸಂಖ್ಯೆ:1:96] ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
8. ಈ ಪ್ರೌಢಶಾಲಾ ನೊಂದಾವಣಿಯಂತೆ ಸರ್ಕಾರಿ ಅಧಿಸೂಚನೆ ಸಂ:ಇಡಿ:175:ಪಿಎಂಸಿ:95, ದಿ:07-09-1998 ಮತ್ತು ದಿ:29-12-1998ರ ಪ್ರಕಾರ ಶಾಶ್ವತ ಅನುದಾನ ರಹಿತವಾಗಿರುತ್ತದೆ. ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ. 10-00 ಛಾಪಾ ಕಾಗದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ನೀಡುವುದು.

9. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು [ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ; ಸೇವಾ ಷರತ್ತು ಮತ್ತು ನಿಬಂಧನೆಗಳು] ನಿಯಮ 1999ರ ನಿಯಮಗಳನ್ವಯ ಸರ್ಕಾರದ ಅಧಿಸೂಚನೆ ದಿನಾಂಕ:27.12.2007 ರ ಸೂಚನೆಯನ್ನು ಕಡ್ಡಾಯವಾಗಿ ಪಾಲಿಸುವುದು.
10. ಇಲಾಖೆ ಹಾಗೂ ಸರ್ಕಾರ ನಿಗಧಿಪಡಿಸಿದ ಪಠ್ಯಪುಸ್ತಕ, ಪರೀಕ್ಷಾ ಕ್ರಮಗಳನ್ನು ಮಾತ್ರ ತಪ್ಪದೇ ಅಳವಡಿಸತಕ್ಕದ್ದು.
11. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಇರತಕ್ಕದ್ದು. ಪ್ರತಿ ತರಗತಿಯಲ್ಲಿ ಕನಿಷ್ಠ ಹಾಜರಾತಿ 25 ಇರತಕ್ಕದ್ದು.
12. ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.
13. ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇದ 8ರ ಅಡಿಯಲ್ಲಿ ಉಪಬಂಧ 36–39ರಂತೆ ನೊಂದಾಯಿಸಿದ ಎಲ್ಲಾ ಶಾಲೆಗಳ ಮಾನ್ಯತೆ ಹಾಗೂ ತಾತ್ಕಾಲಿಕ ಮಾನ್ಯತೆ ವ್ಯಾಪ್ತಿಗೆ ಬರುವುದು.
14. ಪ್ರತಿ ವರ್ಷವು ವಿದ್ಯಾರ್ಥಿಗಳ ವೈಧ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.
15. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಜಿಲ್ಲಾ ಉಪನಿರ್ದೇಶಕರು ಹಾಗೂ ಆಡಳಿತ ಮಂಡಳಿಯ ಜಂಟಿ ಖಾತೆಯಲ್ಲಿ ಇರಿಸತಕ್ಕದ್ದು.
16. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು, ಆಟದ ಮೈದಾನ, ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದಲ್ಲಿ ಒದಗಿಸಿಕೊಳ್ಳತಕ್ಕದ್ದು, ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.
17. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭದ ಮೂರು ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತಾನಾಗೇ ರದ್ದಾಗುವುದು.
18. ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆಯನ್ನು ಕಡ್ಡಾಯವಾಗಿ ಒದಗಿಸಬೇಕು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಬೇಕು.
19. ಪ್ರಥಮ ಮಾನ್ಯತೆಗಾಗಿ ಉಪನಿರ್ದೇಶಕರಿಗೆ ಪ್ರಸ್ತಾವನೆ ಸಲ್ಲಿಸುವುದು, ಉಪನಿರ್ದೇಶಕರು ಶಿಕ್ಷಣ ಕಾಯ್ದೆ ಮತ್ತು ಸರ್ಕಾರದ ಆದೇಶ ದಿನಾಂಕ:30–09–2007ರ ಅನುಬಂಧ–3ರ ಚೆಕ್‌ಲಿಸ್ಟ್‌ನಲ್ಲಿ ಮಾಹಿತಿ ಪಡೆದು ಈ ಆಧಾರದ ಮೇಲೆ ಶಾಲೆ ಪ್ರಾರಂಭಿಸಿದ ಮೂರು ತಿಂಗಳೊಳಗೆ ಕಡ್ಡಾಯವಾಗಿ ಪ್ರಥಮ ಮಾನ್ಯತೆ ನೀಡುವುದು, ನಿಗದಿತ ಅವಧಿಯೊಳಗೆ ಮಾನ್ಯತೆ ಪಡೆಯದಿದ್ದಲ್ಲಿ ನೋಂದಣಿ ತಂತಾನೆ ರದ್ದಾಗುತ್ತದೆ.
20. ಶಾಲೆಯ ಕಟ್ಟಡ ಸುರಕ್ಷತೆಯ ಬಗ್ಗೆ ಬೆಂಕಿ ಬಿರುಗಾಳಿ ವಿದ್ಯುತ್ ಅಪಘಾತ ಮುಂತಾದ ಅವಗಢಗಳಿಂದ ಸುರಕ್ಷಿತವಾಗಿರುವ ಬಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.
21. ಕನಿಷ್ಠ 25 ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವ ಷರತ್ತಿಗೊಳಪಟ್ಟಿದೆ.
22. ಶಾಲಾ ಕಟ್ಟಡವನ್ನು ಸಂಸ್ಥೆಯ ಹೆಸರಿಗೆ ನೊಂದಣಿ ಮಾಡಿಕೊಳ್ಳುವ ಷರತ್ತಿಗೊಳಪಟ್ಟಿದೆ.

ದಿನಾಂಕ: 31 – 3 –2012
ಸ್ಥಳ : ಬೆಂಗಳೂರು

31.3.
[ತುಷಾರ್ ಗಿರಿ ನಾಥ್]
ಆಯುಕ್ತರು ಹಾಗೂ ನೊಂದಣಿ ಅಧಿಕಾರಿ

ಗೆ:

1. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ
2. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ
3. ಕಾರ್ಯದರ್ಶಿಗಳು, ಅರ್ಕ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ (ರಿ), ನಂ.91/2 ಡಾ. ಎ.ಎನ್.ಕೃಷ್ಣರಾವ್ ರಸ್ತೆ, ವಿ.ವಿ.ಪುರಂ, ಬೆಂಗಳೂರು.
4. ಕಛೇರಿ ಪ್ರತಿ

ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು- 560001

ಸಂಖ್ಯೆ : ಸಿ7(1)ಪ್ರಾಶಿಅ/ಹೊ.ಶಾ.ನೋ/18/2013-14 ದಿನಾಂಕ : 06/08/2013

ನಮೂನೆ-3

(ನಿಯಮ 3 ಉಪನಿಯಮ 5 (ಬಿ)

ಪ್ರಮಾಣ ಪತ್ರ ಸಂಖ್ಯೆ : 294/2013-14

ಅರ್ಕ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್(ರಿ), ನಂ.91/2, ಡಾ ಎ.ಎಸ್. ಕೃಷ್ಣರಾವ್ ರಸ್ತೆ, ವಿ.ವಿ.ಪುರಂ, ಬೆಂಗಳೂರು ಇವರಿಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆಕ್ಟ್ 1995) ಸೆಕ್ಷನ್ 31 ರಂತೆ ಹಾಗೂ ಸರ್ಕಾರದ ಆದೇಶ ಸಂಖ್ಯೆ ಇಡಿ 45 ಪಿ ಜಿ ಸಿ 2002, ದಿನಾಂಕ : 11.06.2002 ರ ಪ್ರಕಾರ ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ 294 ಪುಟ ಸಂಖ್ಯೆ: 163 ವಾಲ್ಯೂಂ ಸಂಖ್ಯೆ: 16 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

1. ಕ್ರಮ ಸಂಖ್ಯೆ : 294/2013-14
2. ಶಾಲೆಯ ಹೆಸರು ಮತ್ತು ವಿಳಾಸ : ಜ್ಯೆನ್ ಹಿ.ಪ್ರಾ.ಶಾಲೆ ಕಾವಲಗಾನಹಳ್ಳಿ ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ
3. ಅನುಮತಿ ನೀಡಿದ ತರಗತಿ : 6ನೇ ತರಗತಿ, 7ನೇ ತರಗತಿ ಹಾಗೂ 8ನೇ ತರಗತಿ (ಶಾಶ್ವತಅನುದಾನರಹಿತವಾಗಿ)
4. ಪ್ರಾರಂಭಿಸಬೇಕಾದ ಶೈಕ್ಷಣಿಕ ವರ್ಷ : 2013-14, 2014-15 ಹಾಗೂ 2015-16 (Permanently without-aid)
5. ಅನುಮತಿ ನೀಡಿದ ಮಾಧ್ಯಮ : ಆಂಗ್ಲ ಮಾಧ್ಯಮ
6. ಶುಲ್ಕ ಪಾವತಿ ಮಾಡಿರುವುದು : ರೂ. 10,000/-

ಈ ನೋಂದಣಿ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ. ಇದರಲ್ಲಿ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ ಮೇಲ್ಕಂಡ (ನೋಂದಣಿ) ಅನುಮತಿಯನ್ನು ರದ್ದುಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

1. ಈ ನೋಂದಾವಣೆಯು ಕರ್ನಾಟಕ ಶಿಕ್ಷಣ ಸಂಸ್ಥೆಗಳು [ಖಾಸಗಿ ಶಿಕ್ಷಣ ಸಂಸ್ಥೆಗಳ ನಿಯಂತ್ರಣ.ವರ್ಗೀಕರಣ]ನಿಯಮ-1997 ನಿಯಮ-3 [5] [ಬಿ] ನಲ್ಲಿ ಸೂಚಿಸಿರುವ ಅಂಶಗಳಿಗೆ ಒಳಪಟ್ಟಿರುತ್ತದೆ.
2. ಕರ್ನಾಟಕ ಶಿಕ್ಷಣ ಸಂಸ್ಥೆಗಳು [ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ ನಿಗದೀಕರಣ ಇತ್ಯಾದಿ] ನಿಯಮಾವಳಿಗಳು 1995ರ ನಿಯಮ 4, 5, 6 ಮತ್ತು 8 ರನ್ವಯ ಸೂಕ್ತವಾಗಿ ಕ್ರಮವಾಗಿ, ಶಾಲಾ ಕಟ್ಟಡವು ಕಡ್ಡಾಯವಾಗಿ ... ಮೇಲ್ಛಾವಣಿಯನ್ನು ಹೊಂದಿದ್ದು, ಉತ್ತಮ ಗಾಳಿ ಬೆಳಕಿಗೆ ಅವಕಾಶವಿರಬೇಕು. ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯಗಳನ್ನು ಒದಗಿಸಬೇಕು. ಕುಡಿಯುವ ನೀರನ್ನು ಒದಗಿಸಿರಬೇಕು. ಶಾಲಾ ಆವರಣದಲ್ಲಿರುವ ಅಪಾಯಕಾರಿ ಸ್ಥಳಗಳಿಗೆ ಬೇಲಿ ಹಾಕಿ, ಶಾಲಾ ಆವರಣಕ್ಕೆ ಮಕ್ಕಳ ಸುರಕ್ಷತೆಗಾಗಿ ಕಾಂಪೌಂಡನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು. ಮತ್ತು ಬೆಂಕಿ ಅಕಸ್ಮಿಕಗಳನ್ನು ತಪ್ಪಿಸಲು ಅಗತ್ಯ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಬೇಕು.
3. ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
4. ಕರ್ನಾಟಕ ಶಿಕ್ಷಣ ಕಾಯ್ದೆ ಸೆಕ್ಷನ್-41[5] ರಂತೆ ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
5. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹಸ್ತಾಂತರಿಸತಕ್ಕದ್ದಲ್ಲ
6. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸಿದ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಕಾಯ್ದೆ 1983 [ಕರ್ನಾಟಕ ಆಕ್ಟ್ ಸಂಖ್ಯೆ:1:95]ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅವುಗಳಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೆ ಪಾಲಿಸತಕ್ಕದ್ದು.
7. ಈ ಪ್ರಾಥಮಿಕ ಶಾಲಾ ನೋಂದಾವಣೆಯು ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 175 ಪಿ ಜಿ ಸಿ 95, ದಿನಾಂಕ 07-09-98 ಮತ್ತು ದಿನಾಂಕ : 29-12-98 ರ ಪ್ರಕಾರ ಶಾಶ್ವತ ಅನುದಾನರಹಿತವಾಗಿರುತ್ತದೆ [Permanently without-aid]
8. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ [ಶಿಸ್ತು ಮತ್ತು ನಿಯಂತ್ರಣ] ನಿಯಮ 1999ರ ನಿಯಮಗಳನ್ನು ಪಾಲಿಸತಕ್ಕದ್ದು ಅವುಗಳಿಗೆ ಬದ್ಧವಾಗಿರತಕ್ಕದ್ದು

9. ಕರ್ನಾಟಕ ಶಿಕ್ಷಣ ಸಂಸ್ಥೆಗಳ [ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯ ವಸ್ತುನಿಗಧೀಕರಣ ಇತ್ಯಾದಿ] ನಿಯಮಗಳು 1995ರನ್ವಯ ಇಲಾಖೆ ಮತ್ತು ಸರ್ಕಾರ ನಿಗದಿಪಡಿಸಿದ ಪಠ್ಯಪುಸ್ತಕಗಳನ್ನು ಮಾತ್ರ ಬೋಧಿಸತಕ್ಕದ್ದು ಹಾಗೂ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ ಹೊರೆಯಾಗದಂತೆ ಕ್ರಮವಹಿಸುವುದು.

10. ಕರ್ನಾಟಕ ಶಿಕ್ಷಣ ಸಂಸ್ಥೆಗಳ [ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯ ವಸ್ತುನಿಗಧೀಕರಣ ಇತ್ಯಾದಿ] ನಿಯಮಗಳು 1995 ದಿನಾಂಕ:04-10-96ರ ನಿಯಮ-10ರಂತೆ ಟರ್ಮ್ ಶುಲ್ಕ, ಬೋಧನಾ ಶುಲ್ಕ, ವಿಶೇಷ ಅಭಿವೃದ್ಧಿ ಶುಲ್ಕಗಳನ್ನು ಮಾತ್ರ ವಸೂಲಿ ಮಾಡತಕ್ಕದ್ದು ಹಾಗೂ ನಿಯಮ 10(04)ರಂತೆ ಶಾಲೆಯಲ್ಲಿ ವಿದ್ಯಾರ್ಥಿ/ಪೋಷಕರಿಂದ ವಸೂಲಿ ಮಾಡುವ ಶುಲ್ಕಗಳ ವಿವರಗಳ ಒಂದು ಚಾರ್ಟ್ ಅನ್ನು ಶಾಲೆಯ ಸೂಚನಾಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸಿ, ಅದರ ಒಂದು ಪ್ರತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ/ಉಪನಿರ್ದೇಶಕರಿಗೆ ಸಲ್ಲಿಸತಕ್ಕದ್ದು.

11. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ.19. ವಿವಿಧ-99. ದಿನಾಂಕ:14-03-2000ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು [ರೆಗ್ಯುಲೇಷನ್ ಆಫ್ ಸರ್ಟನ್ ಫೀಸ್ ಅಂಡ್ ಡೊನೇಶನ್ಸ್] ನಿಯಮ-1999ರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ಈ ನಿಯಮದಂತೆ ಯಾವುದೇ ವಂತಿಗೆಯನ್ನು ವಸೂಲು ಮಾಡುವಂತಿಲ್ಲ.

12. ಅನುಮತಿ ಪಡೆದ 2 ತಿಂಗಳೊಳಗಾಗಿ ಕರ್ನಾಟಕ ಶಿಕ್ಷಣ ಕಾಯ್ದೆ 1983 [ಆಕ್ಟ್ 1 ಆಫ್ 1995] ಪ್ರಕಾರ ಸೆಕ್ಷನ್ 36 ರಿಂದ 39 ರ ರೀತ್ಯಾ ಹಾಗೂ ಇಡಿ 131 ವಿವಿಧ 98, ಬೆಂಗಳೂರು, ದಿನಾಂಕ : 04-11-99 ರಂತೆ ಮಾನ್ಯತೆ ನವೀಕರಣ [illegible] ಸರ್ಕಾರಿ ಅಧಿಸೂಚನೆ ಸಂಖ್ಯೆ ಇಡಿ 137 ವಿವಿಧ 98, ಬೆಂಗಳೂರು, ದಿನಾಂಕ : 19-05-99 ರ ಪ್ರಕಾರ [illegible] ಪ್ರಾಧಿಕಾರಿಗಳಿಗೆ ಅರ್ಜಿ ಸಲ್ಲಿಸತಕ್ಕದ್ದು ಹಾಗೂ ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ನಿಗದಿತ ಭದ್ರತಾ ಠೇವಣಿಯನ್ನು ಜಿಲ್ಲಾ ಉಪ ನಿರ್ದೇಶಕರ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.

13. ಸರ್ಕಾರದ ಅಧಿಸೂಚನೆ. ಸಂಖ್ಯೆ:ಇಡಿ.52ವಿವಿದ.99 ದಿನಾಂಕ:-02-02-2000ರ ಅನೆಕ್ಸರ್-5ರ ನಿಯಮದಂತೆ ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ಪಾಲಿಸತಕ್ಕದ್ದು.

14. 6ನೇ ತರಗತಿಯಿಂದ 8ನೇ ತರಗತಿಗೆ ಬಿಇಡಿ ತರಬೇತಿ ಹೊಂದಿದ ಶಿಕ್ಷಕರನ್ನು ನೇಮಿಸಿಕೊಳ್ಳತಕ್ಕದ್ದು.

15. ಕರ್ನಾಟಕ ಶಿಕ್ಷಣ ಸಂಹಿತೆಯ ನಿಯಮಗಳಂತೆ ಶಾಲೆಗೆ ಒದಗಿಸಬೇಕಾದ ಮೂಲಭೂತ ಸೌಕರ್ಯಗಳಾದ [illegible] ಪಾಠೋಪಕರಣ, ಗ್ರಂಥಾಲಯ ಮುಂತಾದ ಸೌಲಭ್ಯಗಳನ್ನು ಒಂದು ವರ್ಷದ ಒಳಗಾಗಿ ಹಾಗೂ ಸ್ವಂತ ಶಾಲಾ ಕಟ್ಟಡವನ್ನು ಮೂರು ವರ್ಷದೊಳಗಾಗಿ ಒದಗಿಸಿಕೊಳ್ಳತಕ್ಕದ್ದು.

16. ಶಾಲಾ ಕೆಲಸದ ಅವಧಿ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.

17. ಶಾಲೆಯನ್ನು ಪ್ರಾರಂಭಿಸಿ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತನ್ನಿಂದ ತಾನೇ ರದ್ದಾಗುವುದು.

18. ಈಗಾಗಲೇ 1 ರಿಂದ 7ನೇ ತರಗತಿ ಕನ್ನಡ ಮಾಧ್ಯಮ ಇದ್ದಲ್ಲಿ, ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯ ಮಂಜೂರಾತಿಯಿಂದ ಕನ್ನಡ ಮಾಧ್ಯಮದ ತರಗತಿಗಳಿಗೆ ಯಾವುದೇ ರೀತಿ ಧಕ್ಕೆ ಬಾರದಂತೆ ನೋಡಿಕೊಳ್ಳುವುದು.

19. ಸರ್ಕಾರದ ಸುತ್ತೋಲೆ ಸಂಖ್ಯೆ.ಇಡಿ 27 ಎಸ್‌ಇಪಿ 03 ದಿನಾಂಕ:-13-02-2003 ರ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ, ಶಾಲೆಯಲ್ಲಿ ನೇಮಕಗೊಂಡಿರುವ ಶಿಕ್ಷಕರ/ಸಿಬ್ಬಂದಿ ಸೇವಾ ವಿವರಗಳನ್ನು ನಿಯಮಾನುಸಾರ ದಾಖಲು ಮಾಡಿ ಕಡ್ಡಾಯವಾಗಿ ನಿರ್ವಹಿಸುವುದು.

20. ಶಿಕ್ಷಕರನ್ನು ಗಣತಿ ಕಾರ್ಯಕ್ಕೆ ತಪ್ಪದೇ ನಿಯೋಜಿಸುವುದು.

21. ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ದಾಖಲೆಗಳು ಸುಳ್ಳು ದಾಖಲೆಗಳೆಂದು ಕಂಡು ಬಂದಲ್ಲಿ ಈ ನೋಂದಣಿಯನ್ನು ರದ್ದುಪಡಿಸಲಾಗುವುದು.

22. ಪ್ರತಿ ತರಗತಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ 50 ಕ್ಕೆ ಮೀರಬಾರದು.

23. ಅನುಮತಿ ನೀಡಿದ 5 ವರ್ಷಗಳವರೆಗೆ ಶಾಲಾ ಸ್ಥಳಾಂತರ ಮತ್ತು ಹಸ್ತಾಂತರಕ್ಕೆ ಅವಕಾಶವಿರುವುದಿಲ್ಲ.

24. ಸರ್ಕಾರದ ಪತ್ರದ ಸಂಖ್ಯೆ:ಇಡಿ:122:ಎಸ್.ಇ.ಎಸ್.2007 ಬೆಂಗಳೂರು ದಿನಾಂಕ:17.05.2007 ರ ಪತ್ರದಲ್ಲಿನ ಷರತ್ತುಗಳನ್ನು ಪೂರೈಸತಕ್ಕದ್ದು.

25. 1 ರಿಂದ 5 ನೇ ತರಗತಿವರೆಗೆ ಯಾವ ಮಾಧ್ಯಮದಲ್ಲಿ ನೋಂದಣಿ ನೀಡಲಾಗಿದೆಯೋ ಅದೇ ಮಾಧ್ಯಮದಲ್ಲಿ ಶಾಲೆಯನ್ನು ನಡೆಸತಕ್ಕದ್ದು.

26. ಭಾಷಾ ನೀತಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಪ್ರಕರಣಗಳಲ್ಲಿ ಬರುವ ಅಂತಿಮ ತೀರ್ಪಿನ ಷರತ್ತುಗೊಳಪಟ್ಟು ಮುಂದುವರೆಸುವ ಷರತ್ತಿನ ಮೇರೆಗೆ ಅನುಮತಿಸಿದೆ.

(ಮಹಮ್ಮದ್ ಮೊಹಸಿನ್)
ಆಯುಕ್ತರು ಹಾಗೂ ನೋಂದಣಿ ಅಧಿಕಾರಿಗಳು,

ಪ್ರತಿಗಳು :

1. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ, ಕೋಲಾರ.
2. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಂತಾಮಣಿ
3. ಕಾರ್ಯದರ್ಶಿಗಳು ಅರ್ಕ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್(ರಿ), ನಂ.91/2, ಡಾ ಎ.ಎಸ್. ಕೃಷ್ಣರಾವ್ ರಸ್ತೆ, ವಿ.ವಿ.ಪುರಂ, ಬೆಂಗಳೂರು.
4. ಕಛೇರಿ ಪ್ರತಿ.

D:\New Backup\A Filli Per\2013-14\Wori Unka Doc

**FORM - II**

**[see rule 14(1)]**

**OFFICE OF THE DEPUTY DIRECTOR OF PUBLIC INSTRUCTION.**

**CHIKKABALLAPUR District**

**No. A6/RTE-RR/16/2025-26** 1691 **Date: 13-07-2026**

The Secretary,
Jain public school, #13.
Kavalaganahalli,
chinthamani
chikkaballapur Dt.

Sir / Madam

| | |
|---|---|
| Subject: | Recognition Certificate for the school under sub-rule 4 of Rule 12 of Karnataka Right of Children to Free and Compulsory Education Rules, 2010 and under section 18 of Right of Children to Free and Compulsory Education Act, 2009. |

-000-

With reference to your application dated. 16-04-2026 and subsequent correspondence with the school/inspection by departmental officers, I convey the grant of provisional recognition to the Jain public school, #13.Kavalaganahalli,chinthamani, chikkaballapur Dt. for classe 1 to 10 for a period of three years and subject to fulfilment of following conditions.

01. This is a provisional grant of recognition under the RTE Act and rules and is not extendable beyond Class VIII.
02. The school shall abide by all the provisions of the RTE Act 2009 and the RTE Rules 2010 referred here in.
03. The school shall admit in Class I, to the extent of 25% of the strength of the class, children belonging to weaker sections and disadvantaged groups in the neighbourhood and provide free and compulsory education till completion of elementary education. Provided that if the school admits children in pre-primary classes also, the school shall follow these norms. The children so admitted shall not be discriminated from the rest of the children or segregated or treated separately in any manner.
04. For the children referred in paragraph 3, the school shall be reimbursed as per section 12(2) of the Act. In order to receive such reimbursements, the school shall open and maintain a separate bank account which is subject to audit by the department.
05. The Society/ School shall not collect any capitation fee or voluntary donations from the parents of children at any time either during admission or during the course of the academic year. The school shall collect only tuition and other fee as approved by the department. The scale of fee shall be notified by the school and displayed prominently in the school premises.
06. The school shall not subject the child or the parents to any screening procedure including any test and interview.
07. Admissions shall be made only during the period notified by the department.
08. The school shall not deny admission to any child.

i) for lack of age proof.
ii) on grounds of caste, religion, race or place of birth, language.
iii) If admission is sought subsequent to the extended period of admission

09. The school shall ensure:
10. No child admitted shall be held back in any class or expelled from school till completion of elementary education in a school.
11. No child shall be subjected to physical punishment or mental harassment.
12. No child is required to pass any Board examination till the completion of elementary education.
13. Every child completing elementary education shall be awarded a certificate as laid down under Rule 21.
14. The school shall also admit children with special needs/ special children as per provisions of the Act.
15. The teachers recruited have minimum qualifications as is prescribed for elementary school teachers in the RTE Rules.
16. The salary and allowances payable to and the terms and conditions of service of teachers shall be as prescribed by the state government and the salaries are paid to teachers only through bank.
17. The teachers perform the duties prescribed under section 24(1) of the Act and Rule 17 of the RTE Rules and shall not engage themselves in private tuitions for monetary considerations.
18. The school shall follow the curriculum and text books of the academic authority to which it is affiliated.
19. The school shall admit students in proportion to the facilities available in the school as prescribed in section 19 of the Act.
20. The school shall maintain the norms and standards as specified in section 19 of the Act. The deficiencies noticed by the departmental staff are given in the annexure.
21. The school shall not run any unauthorised classes/ sections either within in the school premises or outside.
22. The school buildings and other infrastructure facilities should not be used either during day or night for any commercial activities or for political and non-educational activities.
23. The school shall not be run for profit to any individual or group or association of persons.
24. The Accounts of the school are audited by a Chartered Accountant and a copy of such audited statements is sent to the DDPI/BEO by end of June every year.

**Yours faithfully**

**Deputy Director of Public Instruction**
**Chikkaballapur Dt.**

Deputy Director of School Education
(ADMIN) Chickballapur
CHICKBALLAPUR DIST.